ಸದಿಳ್ಳ ತಾಲ್ಲೂಕು ಒಡ್ಡಿಂ ಚಾಲು ಸೇತುವೆ ಕಾಮಗಾರಿ.

619 - ಶ್ರೀ ಎಸ್. ಅಂಗಾರ ಸೂಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕು ಮಂಡೇಕೋಲು ಗ್ರಾಮ ಮಂಡೇಕೋಲು ಎಂಬಲ್ಲಿ ಒಡ್ಡಿಂಡಾಲು ಸೇತುವೆಯ ಕಾಮಗಾರಿಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು. ಯಾವ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಯಿತು, ಈವರೆಗೆ ವಿರ್ಚಾದ ಒಟ್ಟು ಹಣ ಎಷ್ಟು, ವಿವರ ನೀಡುವುದು.

ಆ) ಸದರಿ ಸೇತುವೆಯ ಕಾಮಗಾರಿ ಯಾವ ಹಂತದಲ್ಲಿದೆ.

ಇ) ಕಾಮಗಾರಿಯ ಗುಣಮಟ್ಟ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಶಿವಾನಂದ ಪಿಚ್. ಕೌಜಲಗಿ (ಲೋಕೋಪಯೋಗಿ ಇಲಾಖೆ) :

ಅ) ಸೇತುವೆ ಕಾಮಗಾರಿಯನ್ನು 1996ರಲ್ಲಿ 5.00 ಲಕ್ಷ ರೂ.ಗಳ ಅಂದಾಜಿನಲ್ಲಿ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿದೆ. ಇದುವರೆವಿಗೂ 4.35 ಲಕ್ಷ ರೂ.ಗಳು ವೆಚ್ಚವಾಗಿದೆ.

ಆ) ಸೇತುವೆಯ ಮಂಡೇಕೋಲು ಬದಿಯ ಉದ್ದಗಂಬ ಹಾಗೂ ಮಧ್ಯದ ಆಧಾರಸ್ಥಂಭದ ಕೆಲಸ ಪೂರ್ಣಗೊಂಡಿದೆ. ಮಂಡೇಕೋಲು ಬದಿಯ ಒಂದು ಅಂಕಣಕ್ಕೆ ಡೆಕ್ ಸ್ಲಾಬ್ ಹಾಕಲಾಗಿದೆ. ಇನ್ನೊಂದು ಗುದ್ದುಗಂಬ ಪ್ರಗತಿಯಲ್ಲಿದೆ.

ಇ) ಸೇತುವೆ ಕಾಮಗಾರಿಯ ಗುಣಮಟ್ಟ ತೃಪ್ತಿಕರವಾಗಿದೆ.

ವಿರಾಜಪೇಟೆ ತಾಲ್ಲೂಕಿನಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜು.

620 - ಶ್ರೀ ಪಿಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜಿನಿಂದ ಜನರು ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸಮರ್ಪಕ ವಿತರಣೆಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಿ.ಪಿಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿನ ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಜಾರಿಯಿರುವ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ವಿರಾಜಪೇಟೆ ತಾಲ್ಲೂಕಿನಲ್ಲಿಯೂ ಸಹ ಜಾರಿಗೊಳಿಸಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿದೆ.